# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY, RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: 

ಪತ್ರಿಕೆಯ ಹೆಸರು : NAME OF THE NEWS PAPER: 　　ದಿನಾಂಕ : DATE : 14/9/2020

---

ಎಚ್ಚರಿಕೆ ಜತೆ ಸಂಸತ್‌ನ ಮುಂಗಾರು ಅಧಿವೇಶನ | ಕೊರೊನಾ ನಿಯಂತ್ರಣ ಸಂಬಂಧ ಕಠಿಣ ನಿಯಮ

# ಕೊರೊನಾ ನಡುವೆ ಅಧಿವೇಶನ ಇಂದು

**ನವದೆಹಲಿ:** ಕೊರೊನಾತಂಕದ ನಡುವೆಯೇ ಸೋಮವಾರದಿಂದ ಸಂಸತ್‌ನ ಉಭಯ ಸದನಗಳ ಮುಂಗಾರು ಅಧಿವೇಶನ ಆರಂಭಗೊಳ್ಳಲಿದೆ. ಈಗಾಗಲೇ ರೂಪಿಸಿರುವ ನಿಯಮಗಳಂತೆ ಅಧಿವೇಶನದಲ್ಲಿ ಭಾಗಿಯಾಗಲಿರುವ ಸಂಸದರು ಭಾನುವಾರ ಕೊರೊನಾ ಪರೀಕ್ಷೆಗೆ ಒಳಗಾಗಿದ್ದು ಒಟ್ಟು ಐವರಲ್ಲಿ ಪಾಸಿಟಿವ್ ಕಾಣಿಸಿಕೊಂಡಿದೆ. ಸದ್ಯ ಇದು ಆತಂಕಕ್ಕೆ ಕಾರಣವಾಗಿದೆ.

**18 ದಿನ ಅಧಿವೇಶನ :** ಸೆ.14ರಿಂದ ಅ.1ರ ವರೆಗೆ ಸತತವಾಗಿ ಅಧಿವೇಶನ ನಡೆಯಲಿದೆ. ಶನಿವಾರ ಮತ್ತು ಭಾನುವಾರವೂ ರಜೆ ಇರುವುದಿಲ್ಲ. ರೈತರಿಗೆ ವರದಾನವಾಗಲಿರುವ ರೈತರ ಉತ್ಪನ್ನ, ಮಾರಾಟ ಮತ್ತು ವಾಣಿಜ್ಯ ಮಸೂದೆ, 2020 ಹಾಗೂ ರೈತರಿಗೆ ಸ್ವಾವಲಂಬನೆ ನೀಡುವ ಎಂಪಿಎಂಸಿ ಕಾಯ್ದೆಗೆ ತಿದ್ದುಪಡಿ ಮಸೂದೆ ಸೇರಿ 11 ಸುಗ್ರೀವಾಜ್ಞೆಗಳು ಮಸೂದೆ ರೂಪದಲ್ಲಿ ಮಂಡನೆಯಾಗಲಿವೆ.

▶ 7ನೇ ಪುಟಕ್ಕೆ



## ದಿನಕ್ಕೆ ನಾಲ್ಕು ತಾಸು ಕಲಾಪ

**ಮೊದಲ ದಿನವಾದ ಸೋಮವಾರ ಮಾತ್ರ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಬೆಳಗ್ಗೆಯೇ ಕಲಾಪ ನಡೆಸಲಾಗುತ್ತಿದೆ. ಅಗಲಿದ ಗಣ್ಯರಿಗೆ ನಮನ ಸಲ್ಲಿಸಿ ಮಂಗಳವಾರಕ್ಕೆ ಮುಂದೂಡಿಕೆ ಮಾಡುವ ಸಂಭವವಿದೆ. ಪ್ರಶ್ನೋತ್ತರ ಅವಧಿಗೆ ಅವಕಾಶ ನೀಡಲಾಗಿಲ್ಲ.**

**ಬೆಳಗ್ಗೆ ರಾಜ್ಯಸಭೆ:** ರಾಜ್ಯಸಭೆಯಲ್ಲೂ ಮಂಗಳವಾರದಿಂದ ಬೆಳಗ್ಗೆ 9 ಗಂಟೆಯಿಂದ ಮಧ್ಯಾಹ್ನ 1 ಗಂಟೆವರೆಗೆ ಕಲಾಪ ನಡೆಯಲಿದೆ. ನಾಲ್ಕು ಗಂಟೆಗಳು ಮಾತ್ರ ಕಲಾಪ.

**ಅಪರಾಹ್ನ ಲೋಕಸಭೆ:** ಲೋಕಸಭೆ ಕಲಾಪ ಶುರುವಾಗುವ ಸಮಯ ಮಧ್ಯಾಹ್ನ 3 ಗಂಟೆ. ಸಂಜೆ 7ರವರೆಗೆ ಕಲಾಪ ಮುಂದುವರಿಯಲಿದೆ. ಅಂದರೆ ನಾಲ್ಕು ಗಂಟೆಗಳ ಕಾಲ ಅಧಿವೇಶನ ನಡೆಯಲಿದೆ.

## ಹಿರಿಯರ ಗೈರು?

ಮೂಲಗಳ ಪ್ರಕಾರ, 65 ವರ್ಷ ಮೀರಿದ ಬಹಳಷ್ಟು ಸಂಸದರು ಕಲಾಪದಿಂದ ದೂರ ಉಳಿಯುವ ಸಾಧ್ಯತೆ ಇದೆ. ಲೋಕಸಭೆ ಮತ್ತು ರಾಜ್ಯಸಭೆಗಳೆರಡನ್ನೂ ಸೇರಿಸಿದರೆ ಒಟ್ಟು 785 ಸಂಸದರಿದ್ದಾರೆ. ಇವರಲ್ಲಿ 200 ಮಂದಿ 65 ವರ್ಷ ಮೇಲ್ಪಟ್ಟವರು. ಅದರಲ್ಲೂ ರಾಜ್ಯಸಭೆಯ ಒಟ್ಟು 247 ಸದಸ್ಯರಲ್ಲಿ 97 ಮಂದಿ 65 ವರ್ಷ ಮೀರಿದವರು, 20 ಮಂದಿ 80 ವರ್ಷ ಮೀರಿದವರು ಇದ್ದಾರೆ. ಉದಾಹರಣೆಗೆ ಡಾ. ಮನಮೋಹನ್ ಸಿಂಗ್ (87), ಎ.ಕೆ.ಆ್ಯಂಟನಿ (82), ಎಚ್.ಡಿ.ದೇವೇಗೌಡ (82). ಅತ್ತ ಲೋಕಸಭೆಯಲ್ಲಿ 130 ಸಂಸದರು 65 ವರ್ಷ ಮೀರಿದವರಿದ್ದರೆ, 30 ಸಂಸದರು 75 ವರ್ಷ ಮೇಲ್ಪಟ್ಟವರಿದ್ದಾರೆ. ಒಬ್ಬರು 90 ವರ್ಷದವರೂ ಇದ್ದಾರೆ.

**ಕೊರೊನಾ ಸೋಂಕು**
- 07 ಕೇಂದ್ರ ಸಚಿವರು
- 20 ಸಂಸದರು
- ಒಬ್ಬರು ಮೃತ

---

## ಕೊರೊನಾ ನಡುವೆ ಅಧಿವೇಶನಕ್ಕೆ ಸಿದ್ಧತೆ

1ನೇ ಪುಟದಿಂದ ▶ **ಕುಳಿತುಕೊಳ್ಳುವ ವ್ಯವಸ್ಥೆ ಬದಲು:** ಸಾಮಾಜಿಕ ಅಂತರ ಕಾಯ್ದುಕೊಳ್ಳುವ ದೃಷ್ಟಿಯಿಂದ ಕುಳಿತುಕೊಳ್ಳುವ ವ್ಯವಸ್ಥೆಯನ್ನೇ ಬದಲು ಮಾಡಲಾಗಿದೆ. ಲೋಕಸಭೆ ಮತ್ತು ರಾಜ್ಯಸಭೆಯ ಒಳಗೆ ಸೀಟುಗಳನ್ನು ವ್ಯವಸ್ಥೆ ಮಾಡಲು ಆಗದ ಕಾರಣ, ಕೆಲವರಿಗೆ ತಮ್ಮ ತಮ್ಮ ಕಚೇರಿಗಳಲ್ಲಿ ಮತ್ತು ಮೊಗಸಾಲೆಯಲ್ಲಿ ಕುಳಿತು ಸದನದಲ್ಲಿ ಭಾಗಿಯಾಗಲು ಅವಕಾಶ ಕಲ್ಪಿಸಲಾಗಿದೆ.

**ಹಾಜರಾತಿಗೆ ಆ್ಯಪ್:** ಸದನದಲ್ಲಿ ಭಾಗಿಯಾಗುವ ಸಂಸದರಿಗೆ ಅನುಕೂಲವಾಗುವ ದೃಷ್ಟಿಯಿಂದ ಮೊಬೈಲ್ ಆ್ಯಪ್ ಅನ್ನು ಅಭಿವೃದ್ಧಿಗೊಳಿಸಲಾಗಿದೆ. ಈ ಮೂಲಕವೇ ಸಂಸದರು ಹಾಜರಿ ಹಾಕಬಹುದಾಗಿದೆ.

**ಸರ್ವ ಪಕ್ಷಗಳ ಸಭೆ ಇಲ್ಲ :** ಇದೇ ಮೊದಲ ಬಾರಿಗೆ ಸರ್ವಪಕ್ಷಗಳ ಸಭೆ ನಡೆಸದೇ ಅಧಿವೇಶನ ಆರಂಭಿಸಲಾಗುತ್ತಿದೆ. ಆದರೆ, ಲೋಕಸಭೆ ಸ್ಪೀಕರ್ ಓಂ ಬಿರ್ಲಾ ಅವರು ಭಾನುವಾರ ಕಲಾಪ ಸಲಹಾ ಸಮಿತಿ ಸಭೆ ನಡೆಸಿ, ಪ್ರತಿಪಕ್ಷ ಸದಸ್ಯರ ಬೆಂಬಲ ಕೋರಿದ್ದಾರೆ.